CS (Main) Exam,2021

HXS-C-KND

# ಕನ್ನಡ / KANNADA

## (ಕಡ್ಡಾಯ ಪತ್ರಿಕೆ) / (COMPULSORY)

| | |
|---|---|
| ವೇಳೆ : ಮೂರು ಗಂಟೆ<br>Time Allowed : **Three** Hours | ಗರಿಷ್ಠ ಅಂಕಗಳು : **300**<br>Maximum Marks : **300** |

### ಪ್ರಶ್ನೆ ಪತ್ರಿಕೆ ನಿರ್ದಿಷ್ಟ ಸೂಚನೆಗಳು

***ಪ್ರಶ್ನೆಗಳನ್ನು ಉತ್ತರಿಸುವ ಮುನ್ನ ಕೆಳಗಿನ ಪ್ರತಿಯೊಂದು ಸೂಚನೆಗಳನ್ನು ಎಚ್ಚರಿಕೆಯಿಂದ ಓದಿರಿ :***

ಎಲ್ಲಾ ಪ್ರಶ್ನೆಗಳನ್ನೂ ಉತ್ತರಿಸಬೇಕು.

ಪ್ರಶ್ನೆ/ಪ್ರಶ್ನೆಯ ಭಾಗಗಳಿಗೆ ಅನ್ವಯವಾಗುವ ಅಂಶಗಳನ್ನು ಅವುಗಳ ಎದುರಿಗೆ ಕೊಡಲಾಗಿದೆ.

ಉತ್ತರಗಳನ್ನು ಪ್ರಶ್ನೆಯಲ್ಲಿ ಸೂಚಿಸದ ಹೊರತು, **ಕನ್ನಡದಲ್ಲೇ (ಕನ್ನಡ ಲಿಪಿಯಲ್ಲೇ)** ಬರೆಯಬೇಕು.

ಎಲ್ಲೆಲ್ಲಿ ಪ್ರಶ್ನೆಗಳಲ್ಲಿ ಪದಗಳ ಮಿತಿಯನ್ನು ಸೂಚಿಸಲಾಗಿದೆಯೋ ಆ ಸೂಚನೆಯನ್ನು ಪಾಲಿಸಬೇಕು. ಪದಗಳ ಮಿತಿ ಸೂಚಿಸಿದ್ದಕ್ಕಿಂತ ಹೆಚ್ಚು ಅಥವಾ ಕಡಿಮೆಯಾದಲ್ಲಿ ಅಂಕಗಳನ್ನು ಕಡಿತಗೊಳಿಸಲಾಗುವುದು.

ಯಾವುದಾದರೂ ಪುಟ ಅಥವಾ ಪುಟದ ಭಾಗವನ್ನು ಪ್ರಶ್ನೆ ಸಹಿತವಾದ ಉತ್ತರ ಪತ್ರಿಕೆಯಲ್ಲಿ ಖಾಲಿ ಬಿಟ್ಟಲ್ಲಿ, ಆ ಜಾಗವನ್ನು ಸ್ಪಷ್ಟವಾಗಿ ಪೆನ್ನಿನಿಂದ ಹೊಡೆದು ಹಾಕಬೇಕು.

### Question Paper Specific Instructions

***Please read each of the following instructions carefully before attempting questions :***

*All questions are to be attempted.*

*The number of marks carried by a question / part is indicated against it.*

*Answers must be written in* ***KANNADA (Kannada script)*** *unless otherwise directed in the question.*

*Word limit in questions, wherever specified, should be adhered to and if answered in much longer or shorter than the prescribed length, marks may be deducted.*

*Any page or portion of the page left blank in the Question-cum-Answer Booklet must be clearly struck off.*

**Q1.** ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಿಷಯದ ಬಗ್ಗೆ 600 ಪದಗಳಲ್ಲಿ ಪ್ರಬಂಧ ಬರೆಯಿರಿ : ***100***

(a) ಮಕ್ಕಳಲ್ಲಿ ಅಪೌಷ್ಟಿಕತೆಯ ಸಮಸ್ಯೆ

(b) ವಿಶ್ವಶಾಂತಿಯ ಸವಾಲುಗಳು

(c) ಮಾತೃಭಾಷೆ ಮತ್ತು ಪ್ರಾಥಮಿಕ ಶಿಕ್ಷಣ

(d) ಬಾಡಿಗೆ ತಾಯ್ತನ ಮತ್ತು ಸಾಮಾಜಿಕ ಮಾನ್ಯತೆ

**Q2.** ಈ ಗದ್ಯ ಪತ್ಯವನ್ನು ಓದಿ ಕೊನೆಯಲ್ಲಿ ಕೊಟ್ಟಿರುವ ಪ್ರಶ್ನೆಗಳಿಗೆ ನಿಮ್ಮದೇ ಭಾಷೆಯಲ್ಲಿ ಉತ್ತರಿಸಿರಿ. ನಿಮ್ಮ ಉತ್ತರಗಳು ನೇರ, ಸ್ಪಷ್ಟ ಸರಳ ಮತ್ತು ಸಂಕ್ಷಿಪ್ತವಾಗಿರಲಿ : ***12×5=60***

ಪ್ರಾಚೀನ ಭಾರತದಲ್ಲಿ ರಾಜಸತ್ತೆಯು ಎಷ್ಟು ಪ್ರಭಾವ ಶಾಲಿಯಾಗಿತ್ತೆಂದರೆ ಆ ಕಾಲದಲ್ಲಿ ರಾಜನೇ ರಾಜ್ಯದ ಆತ್ಮವಾಗಿದ್ದನು. ಪ್ರಾಚೀನ ಶಾಸ್ತ್ರಗಳು ರಾಜನಾದವನು ದೇವರ ಪ್ರತಿನಿಧಿ ಯಾಗಿದ್ದು ಪ್ರಜೆಗಳ ಕಷ್ಟಕಾರ್ಪಣ್ಯಗಳೆಲ್ಲವೂ ಅವನಿಂದಲೇ ದೂರವಾಗುವವು ಎಂದು ಹೇಳುತ್ತವೆ. ರಾಜನಿಲ್ಲದ ರಾಜ್ಯವು ಆತಂಕಗಳಿಂದ ಕೂಡಿರುತ್ತದೆ. ಪ್ರಾಚೀನ ಇತಿಹಾಸಕಾರರಿಂದ ಹಿಡಿದು ಇಂದಿನವರೆಗೂ ಅನೇಕರು ಕಾಲದಿಂದ ಕಾಲಕ್ಕೆ ರಾಜ ಮತ್ತು ರಾಜ ಸತ್ತೆಗಳ ಕುರಿತಂತೆ ಅಭಿಪ್ರಾಯಗಳನ್ನು ವ್ಯಕ್ತ ಪಡಿಸುತ್ತಾ ಬಂದಿದ್ದಾರೆ ಈ ಅಭಿಪ್ರಾಯಗಳು ಪ್ರಧಾನವಾದ ಕೆಲವು ವಿಚಾರಧಾರೆಗಳನ್ನು ಹುಟ್ಟುಹಾಕಿದೆ. ಅವುಗಳೆಂದರೆ ದೈವಸೂತ್ರ, ಅಧಿಕಾರಸೂತ್ರ, ರಕ್ಷಣಾಸೂತ್ರ, ಸಾಮಾಜಿಕ ಒಪ್ಪಂದದ ಸೂತ್ರ ಮುಂತಾದವು.

ಕೌಟಿಲ್ಯನು 'ರಾಜ್ಯ' ವನ್ನು ಬಹು ಮುಖ್ಯ ಅಗತ್ಯ ಮತ್ತು ಕಲ್ಯಾಣಕಾರಕ ವ್ಯವಸ್ಥೆಯೆಂದು ಭಾವಿಸಿದ್ದನು ಅವನು ರಾಜತ್ವ ಮತ್ತು ರಾಜ್ಯದ ವಿಕಾಸದ ಕುರಿತು ಮಾತನಾಡದೆ ಹೋದಾಗಲೂ ತನ್ನ ಅರ್ಥಶಾಸ್ತ್ರದಲ್ಲಿ ಸ್ಪಷ್ಟವಾಗಿ ದೊಡ್ಡಮೀನು ಸಣ್ಣಮೀನನ್ನು ಕಬಳಿಸುವಂತೆ. ಪ್ರಾಚೀನ ಕಾಲದಲ್ಲಿ ಸಬಲರು ದುರ್ಬಲರ ಮೇಲೆ ದೌರ್ಜನ್ಯವೆಸಗುತ್ತಿದ್ದುದಾಗಿ ಅಭಿಪ್ರಾಯಪಡುತ್ತಾನೆ. ಪ್ರಜೆಗಳು ಇಂತಹ ಅನ್ಯಾಯಗಳಿಂದಾಗಿ ಹಿಂಸೆಗೊಳಗಾಗುತ್ತಿದ್ದರು. ಮತ್ಸ್ಯ ನ್ಯಾಯ ಅಂದರೆ ಮೀನಿನ ನ್ಯಾಯ, ಮತ್ತೊಂದು ಮಾತಿನಲ್ಲಿ ಹೇಳುವದಾದರೆ ಕಾಡಿನ ನ್ಯಾಯಗಳು ಪ್ರಜೆಗಳನ್ನು ಹಿಂಸೆಗೆ ಗುರಿ ಮಾಡಿದ್ದವು. ಒಂದು ಕಾಲದಲ್ಲಿ ಹಿಂಸೆಗೊಳಪಟ್ಟ ಪ್ರಜೆಗಳು ಒಗ್ಗೂಡಿ ಯೋಗ್ಯನಾದ ಒಬ್ಬನನ್ನು ತಮ್ಮ ರಾಜನನ್ನಾಗಿ ಮಾಡಿಕೊಂಡರು. ಅಷ್ಟೆ

ಅಲ್ಲದೆ ತಮ್ಮ ವ್ಯವಸಾಯದ ಉತ್ಪನ್ನಗಳಿಂದ ಬರುವ ಆದಾಯದಲ್ಲಿ ಆರನೆಯ ಒಂದು ಭಾಗವನ್ನು ಮತ್ತು ವ್ಯಾಪಾರದಿಂದ ಬರುವ ಹತ್ತನೆಯ ಒಂದು ಭಾಗವನ್ನು ರಾಜನಿಗೆ ಒಪ್ಪಿಸುವದಾಗಿ ನಿರ್ಣಯಿಸಿದರು. ಇದಕ್ಕೆ ಪ್ರತಿಯಾಗಿ ರಾಜನು ಪ್ರಜೆಗಳ ಕ್ಷೇಮವನ್ನು ನೋಡಿಕೊಳ್ಳ ತೊಡಗಿದನು. ರಾಜನು ತಾನು ಜಾರಿಗೆ ತಂದ ಕಾನೂನು ಕಟ್ಟಳೆಗಳನ್ನು ವಿರೋಧಿಸುವವರಿಗೆ ಶಿಕ್ಷೆಗಳನ್ನು ವಿಧಿಸುತ್ತಿದ್ದನು. ರಾಜನನ್ನು ಯಮ ಮತ್ತು ಇಂದ್ರರಂತೆ ರಕ್ಷಕನು ಮತ್ತು ಪೋಷಕನು ಎಂದು ಭಾವಿಸಲಾಗುತ್ತಿತ್ತು. ಕೌಟಿಲ್ಯನ ಅಭಿಪ್ರಾಯದಂತೆ ರಾಜನ ಆಜ್ಞೆಗಳಿಗೆ ಅವಿಧೇಯ ನಾಗಿರುವುದು ಅಥವಾ ಅವಮಾನಿಸುವುದು ನಿಷಿದ್ಧವಾಗಿತ್ತು.

ರಾಜನ ಆಶ್ರಯದಲ್ಲಿರುವ ಪ್ರಜೆಗಳು ತಮ್ಮ ಮನೆಯ ಬಾಗಿಲುಗಳನ್ನು ತೆರೆದಿಟ್ಟು ನಿರ್ಭಯವಾಗಿ ಓಡಾಡಬಹುದಿತ್ತು. ಮಹಿಳೆಯರು ಆಭರಣಗಳನ್ನು ಧರಿಸಿ ಒಂಟಿಯಾಗಿಯೇ ತಿರುಗಾಡಬಹುದಿತ್ತು. ಇಂತಹ ರಾಜ್ಯವು ಮಾತ್ರವೆ ಎಲ್ಲ ರೀತಿಯಿಂದ ಸಮೃದ್ಧವಾಗಿರಲು ಸಾಧ್ಯ ಇಂತಹ ಅನೇಕ ಸತ್ಯಸಂಗತಿಗಳು ಕೌಟಿಲ್ಯನ ಅರ್ಥಶಾಸ್ತ್ರ ಮತ್ತು ಇತರ ಪ್ರಾಚೀನ ಗ್ರಂಥಗಳಲ್ಲಿ ಆಳವಾಗಿ ಚರ್ಚಿಸಲ್ಪಟ್ಟಿವೆ. ಆರಂಭದ ದಿನಗಳಲ್ಲಿ ರಾಜನ ಅಂತಸ್ತು, ಸ್ಥಾನಮಾನಗಳು ಸ್ಥಾಯಿಯಾಗಿರಲಿಲ್ಲ. ಆದರೆ ಉತ್ತರ ವೇದಕಾಲೀನ ಯುಗದಲ್ಲಿ ರಾಜ್ಯವು ವಿಸ್ತಾರಗೊಂಡಂತೆಲ್ಲಾ ರಾಜನ ಹಕ್ಕುಗಳು ಮತ್ತು ಆತನ ಘನತೆಯು ಹೆಚ್ಚುತ್ತ ಹೋಯಿತು. ಆಗ ಪ್ರಜೆಗಳ ರಕ್ಷಣೆಗಿಂತಲೂ ರಾಜನ ರಕ್ಷಣೆಯ ಕಡೆಗೆ ಹೆಚ್ಚು ಗಮನವನ್ನು ಹರಿಸಲಾಯಿತು. ರಾಜನ ಸ್ಥಾನಮಾನಗಳಿಗೆ ಅನುಗುಣವಾಗಿ ರಾಜನ ವರ್ಚಸ್ಸು, ಘನತೆ ಮತ್ತು ಪ್ರದರ್ಶನಗಳು ಹೆಚ್ಚಿದವು. 'ಶುಕ್ರ ನೀತಿಸಾರ'ದಲ್ಲಿ ಈ ಎಲ್ಲವುಗಳನ್ನು ವಿಸ್ತಾರವಾಗಿ ವಿವರಿಸಲಾಗಿದೆ.

(a) ಪ್ರಾಚೀನ ಕಾಲದಲ್ಲಿ 'ರಾಜ' ಮತ್ತು ರಾಜ್ಯದ ಪರಿಕಲ್ಪನೆಗಳೇನು ? *12*

(b) 'ಮತ್ಸ್ಯ ನ್ಯಾಯ' ಎಂದರೇನು ? *12*

(c) 'ರಾಜ' ಮತ್ತು 'ಪ್ರಜೆ'ಯ ನಡುವಿನ ಪರಸ್ಪರ ಸಂಬಂಧವನ್ನು ವಿವರಿಸಿರಿ. *12*

(d) 'ಮಾನವೀಯ ಕಾನೂನು' ಎಂದರೇನು ? *12*

(e) ಉತ್ತರವೇದ ಕಾಲೀನ ರಾಜ್ಯದ ಪ್ರಜೆಗಳಲ್ಲಿ ಕಂಡುಬಂದ ಬದಲಾವಣೆಗಳಾವವು ? *12*

**Q3. ಕೆಳಕಂಡ ಪಠ್ಯವನ್ನು ಅದರ ಮೂರನೆಯ ಒಂದು ಭಾಗಕ್ಕೆ ಮೀರದಂತೆ ಸಂಗ್ರಹಿಸಿ ನಿಮ್ಮದೇ ಆದ ಪದಗಳಲ್ಲಿ ಬರೆಯಿರಿ. ತಲೆಬರಹ ಕೊಡುವ ಅಗತ್ಯ ಇಲ್ಲ :** ***60***

ರಾಜಾ ರಾಮಮೋಹನರಾಯರ ಸಾಮಾಜಿಕ ಚಟುವಟಿಕೆಗಳನ್ನು ವಿರೋಧಿಸುತ್ತಿದ್ದ ಭಾರತದ ವ್ಯಾಪಾರಿಗಳು 'ಬ್ರಹ್ಮಸಮಾಜ'ದ ವರ್ಚಸ್ಸನ್ನು ಕುಗ್ಗಿಸಲು ಕ್ರಿ.ಶ. 1830 ರಲ್ಲಿ 'ಧರ್ಮಸಮಾಜ' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಅದೇ ಸಮಯಕ್ಕೆ ಹೆನ್ರಿ ಡೆರೋಜಿಯಾ ಎಂಬುವನು ಆಧುನಿಕ ವಿಚಾರಧಾರೆಗಳನ್ನು ಪ್ರಚಾರ ಮಾಡಲು ಹಿಂದೂ ಕಾಲೇಜಿನಲ್ಲಿ 'ಏಕೇಡಮಿ ಅಸೋಸಿಯೇಶನ್' ಎಂಬ ಸಂಘವನ್ನು ಸ್ಥಾಪಿಸಿದನು. ಈ ಸಂಘವು ಆಧುನಿಕ ವಿಚಾರಗಳನ್ನು ಒಳಗೊಂಡಿದ್ದು ಇದು ಹಿಂದಿನ ಎಲ್ಲ ಸಂಘಗಳಿಗಿಂತಲೂ ಬಲಿಷ್ಠವಾಗಿತ್ತು. ಇದು ಅರ್ಥಹೀನ ಸಂಪ್ರದಾಯಗಳು ಮತ್ತು ಮೂಢನಂಬಿಕೆಗಳ ವಿರುದ್ಧ ಪ್ರತಿಭಟನೆಯನ್ನು ನಡೆಸಿತು. ಇದೇ ಮುಂದಿನ ದಿನಗಳಲ್ಲಿ 'ಯಂಗ್ ಬಂಗಾಲ್' ಎಂಬ ಸಂಸ್ಥೆಯ ಹುಟ್ಟಿಗೆ ಕಾರಣವಾಯಿತು. ಹಿಂದೂ ಕಾಲೇಜಿನ ನೌಕರರು ಸೃಷ್ಟಿಸಿದ ಸಮಸ್ಯೆಗಳಿಂದಾಗಿ ಈ ಸಂಘವು ಶಿಥಿಲಗೊಂಡಿತು. ಇದರ ಸದಸ್ಯರು ಮುಂದಿನ ದಿನಗಳಲ್ಲಿ 'ಬ್ರಹ್ಮಸಮಾಜ' ವನ್ನು ಸೇರಿಕೊಂಡರು. ರಾಜಾ ರಾಮಮೋಹನರಾಯರ ಮರಣದ ಬಳಿಕ ಈ ಸಂಘದ ನಾಯಕತ್ವವನ್ನು ಬಂಗಾಲದ ಪ್ರಖ್ಯಾತ ಉದ್ಯಮಿಯಾದ ದ್ವಾರಕಾನಾಥ ಠಾಕೂರರು ವಹಿಸಿಕೊಂಡರು. 19ನೆಯ ಶತಮಾನದ ನಾಲ್ಕು ಮತ್ತು ಐದರ ದಶಕಗಳಲ್ಲಿ ಇದೇ ರೀತಿಯ ಅನೇಕ ಸಾಮಾಜಿಕ ಸಂಘಟನೆಗಳು ಒಂದರ ನಂತರ ಮತ್ತೊಂದು ಹುಟ್ಟಿಕೊಂಡು ಜ್ಞಾನದ ವಿಸ್ತರಣೆಗೆ ತಮ್ಮನ್ನು ಸಮರ್ಪಿಸಿಕೊಂಡವು. ಕ್ರಿ.ಶ. 1851 ರಲ್ಲಿ 'ಬ್ರಿಟಿಶ್ ಇಂಡಿಯನ್ ಅಸೋಸಿಯೇಶನ್' ಎಂಬ ರಾಷ್ಟ್ರವಾದಿ ರಾಜಕೀಯ ಸಂಘಟನೆಯೊಂದು ಹುಟ್ಟಿಕೊಂಡಿತು.

ಇದೇ ರೀತಿಯ ಸಂಘಟನೆಗಳು ಮುಂಬಯಿಯಲ್ಲಿಯೂ ಸಹ ತಲೆ ಎತ್ತಿದವು. ಈ ಭಾಗದಲ್ಲಿ ಅತ್ಯಂತ ಶ್ರೀಮಂತ ಮತ್ತು ಗೌರವಾನ್ವಿತ ಪಾರ್ಸಿಗಳು ಈ ಸಂಘಟನೆಗಳ ನಾಯಕತ್ವವನ್ನು ವಹಿಸಿಕೊಂಡರು. ಈ ಪಾರ್ಸಿಗಳು ವಸಾಹತು ಆಡಳಿತವನ್ನು ಸಮರ್ಥಿಸಿದರು. ಇವರು ಯುವಕರು ಮತ್ತು ಬುದ್ಧಿಜೀವಿಗಳು ಆಗಿದ್ದು ಯುರೋಪ್ ಮಾದರಿಯ ಶಿಕ್ಷಣ ವ್ಯವಸ್ಥೆಯನ್ನುಳ್ಳ ಎಲ್ಫಿನ್‌ಸ್ಟನ್ ಕಾಲೇಜಿನೊಂದಿಗೆ ಸಂಬಂಧವುಳ್ಳವರಾಗಿದ್ದರು. ಇದರಲ್ಲಿ ಕಂಡು ಬರುವ ಪ್ರಮುಖ ವ್ಯಕ್ತಿಯೆದರೆ ಬಾಲ ಶಾಸ್ತ್ರಿ

ಜಂಬೇಕರ್. ಜಂಬೇಕರ್ ಅವರು ಇಂಗ್ಲೀಷ್-ಮರಾಠಿಯಲ್ಲಿ 'ಬಾಂಬೆ ಮಿರರ್' ಎಂಬ ಪತ್ರಿಕೆಯನ್ನು ಹೊರಡಿಸುತ್ತಿದ್ದುದಲ್ಲದೆ ಬ್ರಿಟಿಶರು ನಡೆಸುವ ಆಡಳಿತದಲ್ಲಿ ಭಾರತೀಯರ ಭಾಗವಹಿಸುವಿಕೆಯನ್ನು ಪ್ರತಿಪಾದಿಸುವುದರೊಂದಿಗೆ ವಸಾಹತು ಶಾಹಿಯು ವಿಧಿಸುವ ತೆರಿಗೆ ಮತ್ತು ಶುಲ್ಕಗಳನ್ನು ಖಂಡಿಸಿದರು. ಇದೇ ಸಂದರ್ಭದಲ್ಲಿ ಕಂಡು ಬರುವ ಮತ್ತೊಬ್ಬ ಬುದ್ಧಿಜೀವಿಯೆಂದರೆ ಭಾರತದ ಇತಿಹಾಸವನ್ನು ಮರಾಠಿಯಲ್ಲಿ ಬರೆದ ರಾಮಕೃಷ್ಣ ವಿಶ್ವನಾಥರು. ಇವರು ಬ್ರಿಟಿಶರ ಆಡಳಿತದ ನೀತಿಗಳನ್ನು ಟೀಕಿಸಿದರು. ಅದರೂ ಅವರು ಆಂಗ್ಲ ಮತ್ತು ಭಾರತೀಯರ ನಡುವೆ ಸೌಹಾರ್ದಯುತ ನಿಕಟ ಸಂಬಂಧಗಳು ಬೆಳೆದಲ್ಲಿ ಎಲ್ಲವನ್ನೂ ಸರಿಪಡಿಸಬಹುದೆಂದು ಭಾವಿಸಿದ್ದರು. ಅದೇ ರೀತಿ ಮತ್ತೊಬ್ಬ ಮಹಾರಾಷ್ಟ್ರದ ಬುದ್ಧಿಜೀವಿಯೆಂದರೆ ಗೋಪಾಲಹರಿ ದೇಶಮುಖರು. ಪುಣೆಯಿಂದ ಪ್ರಕಟವಾಗುತ್ತಿದ್ದ 'ಪ್ರಭಾಕರ' ಪತ್ರಿಕೆಗೆ ಅನೇಕ ಲೇಖನಗಳನ್ನು ಬರೆಯುತ್ತಿದ್ದ ಇವರು ತಮ್ಮ ಲೇಖನಗಳಲ್ಲಿ ಭಾರತದ ಸ್ವಾತಂತ್ರ್ಯ ಹರಣಕ್ಕೆ ಕಾರಣಗಳೇನೆಂಬುದರ ಕುರಿತು ಚರ್ಚಿಸುತ್ತ ಭಾರತದ ಊಳಿಗ ಮಾನ್ಯ ವ್ಯವಸ್ಥೆ ಮತ್ತು ಪ್ರತಿಷ್ಟಿತ ಗಣ್ಯ ಸಮಾಜ ಮತ್ತು ಸಾಮಾನ್ಯರ ನಡುವಿನ ಕಂದಕದಂತಹ ಎರಡು ಪ್ರಮುಖ ಅಂಶಗಳೇ ನಮ್ಮ ಸ್ವಾತಂತ್ರ್ಯ ಹರಣಕ್ಕೆ ಕಾರಣಗಳೆಂದು ಅಭಿಪ್ರಾಯ ಪಟ್ಟರು.

ಇದೇ ಸಮಯದ ಕ್ರಿ.ಶ. 1852 ರಲ್ಲಿ ಸ್ಥಾಪಿತವಾದ 'ಬಾಂಬೆ ಅಸೋಸಿಯೇಶನ್ಸ್ ನ ಸದಸ್ಯರ ನಡುವೆ ಅನೇಕ ಒಡಕುಗಳು ಹುಟ್ಟಿಕೊಂಡವು. ಇದಕ್ಕೆ ಕಾರಣವೆಂದರೆ ಭಾರತದ ಯುವ ವಿದ್ಯಾರ್ಥಿಗಳು ಆಂಗ್ಲರು ಅನುಭವಿಸುತ್ತಿದ್ದ ಹಕ್ಕುಗಳನ್ನು ತಮಗೂ ನೀಡುವಂತೆ ಒತ್ತಾಯಿಸಿದರು. ಆದರೆ ಆಂಗ್ಲರಿಗೆ ಒತ್ತಾಸೆಯಾಗಿದ್ದ ಉನ್ನತವರ್ಗದ ಆಧುನಿಕ ಮನೋವೃತ್ತಿಯ ವ್ಯಾಪಾರಿಗಳು ಈ ವಿಷಯದಲ್ಲಿ 'ಬಾಂಬೆ ಅಸೋಸಿಯೇಶನ್' ನೊಂದಿಗೆ ಭಿನ್ನಮತ ಹೊಂದಿದ್ದರು. ಕೇವಲ 'ಮದ್ರಾಸ್ ಅಸೋಸಿಯೇಶನ್' ಮಾತ್ರ ಭೂಮಾಲಿಕರಿಂದ ರೈತರು ಶೋಷಣೆಗೊಳಗಾಗುತ್ತಿರುವುದರ ಕುರಿತು ದನಿ ಎತ್ತಿತು. ಈಸ್ಟ್ ಇಂಡಿಯಾ ಕಂಪನಿಯ ಇದೇ ಸಂದರ್ಭದಲ್ಲಿ ಸನದ್ದನ್ನು ಪರಿಶೀಲಿಸತೊಡಗಿತು ಆಗ ಈ ಮೂರು ಸಂಘಟನೆಗಳು ಬ್ರಿಟಿಸ್ ವಸಾಹತು ಶಾಹಿ ಆಳ್ವಿಕೆಯಿಂದ ಆಗುತ್ತಿದ್ದ ಅನ್ಯಾಯಗಳ ವಿರುದ್ಧ ದೂರಿ ಲಂಡನ್ನಿನ ಸಂಸತ್ತಿಗೆ ಅರ್ಜಿಗಳನ್ನು ಸಲ್ಲಿಸಿದರು. (330 ಶಬ್ದ)

**Q4. ಕೆಳಕಂಡ ಪಠ್ಯವನ್ನು ಇಂಗ್ಲೀಷಿಗೆ ಅನುವಾದಿಸಿ:** ***20***

ಭೌಗೋಳಿಕ ಪರಿಸರವು ಆಯಾ ದೇಶದ ಇತಿಹಾಸದ ಮೇಲೆ ಪ್ರಭಾವ ಬೀರುವುದುಂಟು. ಭಾರತದ ವಿಚಾರವನ್ನೆ ತೆಗೆದುಕೊಂಡರೆ ಅದರ ನಾಗರಿಕತೆಯು ಯುಗಯುಗಗಳಿಂದಲೂ ಕಾಲದ ಕಟ್ಟಳೆಯಿಲ್ಲದೆ ಸ್ವತಂತ್ರರೂಪದಲ್ಲಿ ವಿಕಾಸಗೊಳ್ಳುತ್ತ ಬಂದಿದೆ. ಉತ್ತರದ ಪರ್ವತ ಶ್ರೇಣಿಗಳು ಮತ್ತು ದಕ್ಷಿಣದ ಸಮುದ್ರಗಳಿಂದಾಗಿ ಇತರ ಪ್ರಪಂಚದಿಂದ ಬೇರ್ಪಟ್ಟ ಭಾರತವು ನೈಸರ್ಗಿಕ ರಕ್ಷಣೆಯನ್ನು ಹೊಂದಿದೆ. ಇದರ ಪರಿಣಾಮವಾಗಿ ವಿದೇಶಿಗರ ಪ್ರಭಾವದಿಂದ ಹೊರಗುಳಿಯಿತು. ಸುಮಾರು 1600 ಮೈಲು ಉದ್ದ ಮತ್ತು 50 ಮೈಲು ಅಗಲದಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ಹಿಮಾಲಯವು ಗೋಡೆಯನ್ನು ನಿರ್ಮಿಸಿದೆ. ಅಲ್ಲದೆ ಪೂರ್ವದ ಪಟ್ಕೋಯ್, ನಾಗಾ, ಮತ್ತು ಲುಶೈ ಪರ್ವತಗಳು ಮತ್ತು ಅವುಗಳ ದಟ್ಟ ಕಾಡುಗಳು ಸಂಪರ್ಕಸಾಧನಕ್ಕೆ ತಡೆಯೊಡ್ಡಿವೆ. ಆದಾಗ್ಯೂ ಪಶ್ಚಿಮದಲ್ಲಿ ಕೆಲವು ಕಾಲುದಾರಿಗಳುಂಟು. ಉದಾಹರಣೆಗೆ ಕೈಬೆರ್ ಮತ್ತು ಬೊಲನ್. ಇವುಗಳ ಮಾರ್ಗದ ಮೂಲಕ ವಿದೇಶಿಗರು ಭಾರತವನ್ನು ಪ್ರವೇಶಿಸುತ್ತಿದ್ದುದುಂಟು. ಆದರೆ ಭಾರತದ ದಕ್ಷಿಣಭಾಗದ ಸಮುದ್ರವು ಶತಮಾನಗಳ ಕಾಲ ಸುಲಭವಾಗಿ ವಿದೇಶಿಗರಿಗೆ ಭಾರತದೊಂದಿಗೆ ಸಂಪರ್ಕವಿಲ್ಲದಂತೆ ಮಾಡಿದ್ದುಂಟು. ಆದರೆ ಕಾಲಾಂತರದಲ್ಲಿ ಹಡಗು ಪ್ರಯಾಣವು ತುಂಬಾ ಪ್ರಗತಿಯನ್ನು ಸಾಧಿಸಿತು. ಇದರ ಪರಿಣಾಮವಾಗಿ ಸಮುದ್ರವು ಸಮುದ್ರವ್ಯಾಪಾರಕ್ಕೆ ಸುಲಭ ಮಾರ್ಗವಾಯಿತು. ಈ ಹಿನ್ನೆಲೆಯಲ್ಲಿಯೇ ಕ್ರಿ.ಶ. 1498 ರಲ್ಲಿ ಪೋರ್ತಗೀಸರು, ವಾಸ್ಕೋಡಿಗಾಮಾನ ನಾಯಕತ್ವದಲ್ಲಿ ಮೊದಲ ಬಾರಿಗೆ ಸಮುದ್ರಪ್ರಯಾಣದ ಮೂಲಕ ಭಾರತವನ್ನು ಪ್ರವೇಶಿಸಿದರು. ನಂತರ ಡಚ್ಚರು, ಫ್ರೆಂಚರು, ಇಂಗ್ಲೀಷರ ಆಗಮನವಾಯಿತು. ಇವರೆಲ್ಲರೂ ಭಾರತದ ಮೇಲೆ ತಮ್ಮ ಸಾರ್ವಭೌಮತ್ವವನ್ನು ಸಾಧಿಸಲು ಪರಸ್ಪರರಲ್ಲಿ ಬಹುದೀರ್ಘಕಾಲ ಹೋರಾಡಿದರು. ಹಾಗಾಗಿ ಭಾರತದ ಭೌಗೋಳಿಕ ಪರಿಸರದ ಕಾರಣವಾಗಿ ಭಾರತೀಯ ನಾಗರಿಕತೆಯ ಮೇಲೆ ಇತರ ವಿದೇಶಿಗರ ಪ್ರಭಾವ ದಟ್ಟವಾಗಿಲ್ಲವೆಂದೇ ಹೇಳಬಹುದು.

**Q5.** ಈ ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಅನುವಾದಿಸಿರಿ : *20*

At the stroke of the midnight hour, when the world sleeps, India will awake to life and freedom. A moment comes, when we step out from the old to the new. It is fitting that at this solemn moment we take the pledge of dedication to the service of India. The service of India means the service of the millions who suffer. It means the ending of poverty and ignorance. It means the ending of disease and inequality of opportunity. The ambition of the greatest man of our generation has been to wipe every tear from every eye. That may be beyond us, but as long as there are tears and suffering, so long our work will not be over. This is no time for petty and destructive criticism, no time for ill-will or blaming others. We have to build the noble mansion of free India where all her children may dwell.

It is a fateful moment for us in India, for all Asia and for the world. A new star rises, the star of freedom in the East, a new hope comes into being. May the star never set and that hope never be betrayed !

**Q6.** (a) ಕೆಳಗಿನ ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ : *2×5=10*

(i) ಮಾತು ಬೆಳ್ಳಿ ಮೌನ ಬಂಗಾರ ! *2*

(ii) ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ ! *2*

(iii) ಅಸಂತೋಷವೇ ಏಳಿಗೆಯ ಮೂಲ ! *2*

(iv) ಅಲ್ಪರ ಸಂಗ ಅಭಿಮಾನ ಭಂಗ ! *2*

(v) ದಯವೆ ಧರ್ಮದ ಮೂಲವಯ್ಯ ! *2*

(b) ಕೆಳಗಿನ ಸಮಾಸ ಪದಗಳನ್ನು ಬಿಡಿಸಿಬರೆಯಿರಿ : *2×5=10*

(i) ಕೆಂದಾವರೆ *2*

(ii) ಅರಮನೆ *2*

(iii) ಮುಕ್ಕಣ್ಣ *2*

(iv) ಗಿಡಮರಬಳ್ಳಿ *2*

(v) ಒಮ್ಮುಖ *2*

**(c)** **ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ :** *2×5=10*

(i) ಕಾಡು *2*

(ii) ಶಶಿ *2*

(iii) ಸಮುದ್ರ *2*

(iv) ಕತ್ತಲು *2*

(v) ಉದ್ಯಾನವನ *2*

**(d)** **ಕೆಳಗಿನ ಪದಗಳನ್ನು ಉಪಯೋಗಿಸಿ ವಾಕ್ಯರಚನೆ ಮಾಡಿರಿ :** *2×5=10*

(i) ಟೋಪಿಹಾಕು *2*

(ii) ಕಣ್ಣುಕೆಂಪಾಗು *2*

(iii) ತಲೆತಿರುಗು *2*

(iv) ಮಾತಿನಮಲ್ಲ *2*

(v) ಲೋಕೋತ್ತರ *2*